**ಅಂದದ ತುಟಿಗಳ ಮೋಹದಲ್ಲಿ..**

# ತುಟಿಗಳಿಗೆ ಡರ್ಮಲ್ ಫಿಲ್ಲರ್ ಚಿಕಿತ್ಸೆ



**ತುಟಿಗಳ ಅಂದ ಹೆಚ್ಚಿಸಲು ಡರ್ಮಲ್ ಫಿಲ್ಲರ್ ಎಂಬ ಚಿಕಿತ್ಸೆ ಬಂದಿದೆ. ಈ ಚಿಕಿತ್ಸೆ ಮೂಲಕ ತುಟಿಗಳನ್ನು ತಿದ್ದಿ ತೀಡಿ ಆಕಾರ ಬದಲಾಯಿಸಬಹುದು, ಅರೆ ಬಿರಿದ ತುಟಿಗಳ ನೋಟವನ್ನು ಸೃಷ್ಟಿಸಬಹುದು. ತುಟಿಗಳ ನಡುವೆ ಸಣ್ಣ ಸಂದನ್ನು ಸೃಷ್ಟಿಸಿ ಈ ತುಟಿಗಳು ಚುಂಬನಕ್ಕಾಗಿಯೇ ಕಾಯುತ್ತಿವೆಯೇನೋ ಎನ್ನುವ ಭ್ರಮೆಯನ್ನು ಸೃಷ್ಟಿಸಬಹುದು..!**

■ **ಡಾ.ಪ್ರೇಮಲತ ಬಿ.**

ಮುಖವೇ ಮನಸ್ಸಿಗೆ ಕನ್ನಡಿ. ಹಾಗೆಯೇ ಮುಖ ಲಕ್ಷಣಗಳಿಗೆ ಬಂದಾಗ ಸುಂದರವಾದ ಕಣ್ಣು, ಮೂಗು, ಬಾಯಿಯಿದ್ದರೆ ಚಂದವೋ ಚಂದ!

ಬಾಯಿಯ ವಿಚಾರ ಬಂದಾಗ ತುಟಿಯ ಅಂದಕ್ಕೆ ಇನ್ನಿಲ್ಲದ ಪ್ರಾಮುಖ್ಯತೆ ಬಂದಿರುವ ಕಾಲವಿದು. ಅರೆ ಬಿರಿದ, ನಳನಳಿಸುವ, ಕಾಮನ ಬಿಲ್ಲಿನಂತೆ ಕಮಾನು ಹೂಡಿರುವ ಮೇಲ್ತುಟಿ, ರಸಜಲ್ಲೆಯಂತೆ ತುಂಬಿದ, ಮೇಲ್ತುಟಿಗಿಂತ ತುಸು ಹೆಚ್ಚು ದಪ್ಪವಿದ್ದು ಹೂವಿನ ದಳದಂತಿರುವ ಕೆಳ ತುಟಿಗಳು ಸೌಂದರ್ಯ ಪರಿಣತರಿಂದ ಹಿಡಿದು ಜಗತ್ತಿನಲ್ಲಿ ಎಲ್ಲರ ಮನತಣಿಸುವ ವಿಚಾರಗಳಾಗಿವೆ.

ಕವಿಯೇ ಇರಲಿ, ಕಲಾವಿದನೇ ಇರಲಿ, ಪ್ರೇಮಿಯೇ ಇರಲಿ, ಸೌಂದರ್ಯಾರಾಧಕರೇ ಇರಲಿ.. ತುಟಿಗಳನ್ನು ವರ್ಣಿಸುವಲ್ಲಿ ಯಾರೂ ಹಿಂತೆಗೆಯುವುದಿಲ್ಲ. ಹಾಗೆಯೇ ಹಾಲಿವುಡ್‌ನ ತಾರೆಯರು, ಮಾಡೆಲ್ ಗಳು, ಟಿ.ವಿ ತಾರೆಯರು, ಸೆಲೆಬ್ರಿಟಿಗಳು ಎಲ್ಲರೂ ತಮ್ಮ ತುಟಿಗಳ ಆಕಾರವನ್ನು, ಅಂದವನ್ನು ವ್ಯಾಪಾರೀ ಮನೋಭಾವದಿಂದ ಬದಲಾಯಿಸಿಕೊಂಡು ಸಾಮಾನ್ಯ ಜನರಲ್ಲಿ ಕನಸನ್ನು ಬಿತ್ತಿದ್ದಾರೆ. ಇದು ಜನಸಾಮಾನ್ಯರ ಕಲ್ಪನೆಗೆ ಕಚಗುಳಿಯಿಟ್ಟಂತೆ ಅವರೂ ಸ್ಪರ್ಧೆಗಿಳಿದಿರುವುದು ನಿಜ. ಇದನ್ನು ತುಟಿಗಳಲ್ಲಿ ಡರ್ಮಲ್ ಫಿಲ್ಲರ್‌ಗಳ ಬಳಕೆಯಿಂದ ಸಾಧಿಸಲಾಗುತ್ತಿದೆ.

### ತುಟಿಗಳಿಗೆ ಡರ್ಮಲ್ ಫಿಲ್ಲರ್

ತುಟಿಗಳಿಗೆ ಡರ್ಮಲ್ ಫಿಲ್ಲರ್ ಇಂಜೆಕ್ಷನ್ ಮೂಲಕ ಅವುಗಳ ಆಕಾರವನ್ನು ಬದಲಾಯಿಸಬಹುದು. ಮೈತುಂಬ ಬಹುದು. ಅರೆಬಿರಿದ ತುಟಿಗಳ ನೋಟವನ್ನು ಸೃಷ್ಟಿಸಬಹುದು. ತುಟಿಗಳ ನಡುವೆ ಸಣ್ಣ ಸಂದನ್ನು ಸೃಷ್ಟಿಸಿ ಈ ತುಟಿಗಳು ಚುಂಬನಕ್ಕಾಗಿಯೇ ಕಾಯುತ್ತಿವೆಯೇನೋ ಎನ್ನುವ ಭ್ರಮೆಯನ್ನು ಸೃಷ್ಟಿಸಬಹುದು. ಕೆಳತುಟಿಯ ನಡುವೆ ಸಣ್ಣ ಕಂದಕವನ್ನು ಸೃಷ್ಟಿಸಿ ಚುಂಬಕ ತುಟಿಗಳ ಸೆಕ್ಸೀ ಲುಕ್ ಸೃಷ್ಟಿಸಲು ಕೇವಲ ಹದಿನೈದು ನಿಮಿಷಗಳು ಸಾಕು.

ಹಾಲಿವುಡ್‌ನ ಏಂಜಲಿನಾ ಜೋಲಿ, ಬಾಲಿವುಡ್‌ನ ಪ್ರಿಯಾಂಕ ಚೋಪ್ರಾರ ತುಟಿಗಳನ್ನು ನೆನೆದು ನಿದ್ದೆಗೆಡುವ ನವತರುಣರಿಗೆ ಆ ತುಟಿಗಳ ಸೃಷ್ಟಿಗೆ ಅರ್ಧ ಗಂಟೆ ಸಾಕೆನ್ನುವ ಅರಿವಾದರೆ ಅವರ ಕನಸು ಭಗ್ನವಾಗುವುದಾದರೂ ನಿಜ.

ಇದು ಬದಲಾದ ಕಾಲ. ಮಾಹಿತಿ ತಂತ್ರಜ್ಞಾನ ಎಲ್ಲರ ಕೈಗೆಟುಕಿರುವಂತೆ, ಸಾಮಾಜಿಕ ತಾಣಗಳು ಸಮಾಜದ ಅಗಾಧವಾದ ಅವಿಭಾಜ್ಯ ಅಂಗವಾಗಿರುವ ಯುಗ. ಇಲ್ಲಿ ಸಂಕೋಚಗಳು ಕಣ್ಮರೆಯಾಗಿವೆ. ತಮ್ಮ ತುಟಿಗಳನ್ನು ಹೇಗೆ ಮಾಡಿಸಿಕೊಂಡೆವು ಎನ್ನುವ ವಿಚಾರವನ್ನು ಹೇಳಿಕೊಳ್ಳುವಲ್ಲಿ ಸಾಮಾಜಿಕ ಪ್ರತಿಷ್ಠೆ ಕಾಲವಿದು. ಯೂ ಟ್ಯೂಬ್‌ನಲ್ಲಿ ಈ ಬಗ್ಗೆ ವೀಡಿಯೋಗಳು ಬರುತ್ತಿವೆ. ಹೆಚ್ಚು, ಹೆಚ್ಚು ಜನರು ಇತರ ಸೌಂದರ್ಯ ಚಿಕಿತ್ಸೆಗಳ ಹೋದಂತೆ ತುಟಿಗಳಿಗೆ ಡರ್ಮಲ್ ಫಿಲ್ಲರ್ ಗಳ ಬಳಕೆ ಪಡೆದು ಅವುಗಳ ಅಂದವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಿದ್ದಾರೆ. ಈ ಚಿಕಿತ್ಸೆಗಳು ಸುಲಭವಾಗಿ ಎಲ್ಲೆಡೆ ದೊರೆಯುತ್ತಿವೆ. ಈ ಸೌಂದರ್ಯವರ್ಧಕ ಚಿಕಿತ್ಸೆಯ ಬೆಲೆಯೂ ಕಡಿಮೆಯಾಗುತ್ತ ಸಾಗಿ ಹೆಚ್ಚು ಜನರು ಅದರಲ್ಲೂ ಯೌವನಿಗರು ಮತ್ತು ಮಧ್ಯವಯಸ್ಕರರು ಈ ಚಿಕಿತ್ಸೆಯನ್ನು ಬಯಸುತ್ತಿದ್ದಾರೆ. ಹಲವು ಸೌಂದರ್ಯವರ್ಧಕ ಚಿಕಿತ್ಸೆಗಳಂತೆ ಇದನ್ನು ಮತ್ತೆ, ಮತ್ತೆ ಮಾಡಿಸಿಕೊಳ್ಳುತ್ತಿರಬೇಕು. ಬೇಡವೆನಿಸಿದಲ್ಲಿ ನಿಲ್ಲಿಸಿದರೆ ಯಾವ ದುಷ್ಪರಿಣಾಮಗಳೂ ಇಲ್ಲ.

ಡರ್ಮಲ್ ಫಿಲ್ಲರ್‌ಗಳು ನಾನಾ ವಿಧಗಳಲ್ಲಿ ಲಭ್ಯವಿವೆ. ಕೆಲವು ಕೇವಲ ಕೆಲವು ತಿಂಗಳ ಕಾಲ ಉಳಿದರೆ ಇನ್ನು ಕೆಲವು ಕೆಲವು ವರ್ಷಗಳವರೆಗೆ ಉಳಿಯಬಲ್ಲವು. ಇನ್ನು ಕೆಲವು ಶಾಶ್ವತವಾಗಿ ಇರಬಲ್ಲವಾದರೂ ನಿಪುಣರು ಅವುಗಳ ಬಳಕೆಯ ಅಪಾಯದ ಬಗ್ಗೆ ಎಚ್ಚರಿಕೆಯ ನೀಡುತ್ತಾರೆ.

ಕೊಲ್ಲಾಜಿನ್ ನಿಂದ ತಯಾರಿಸಿದ ಫಿಲ್ಲರ್‌ಗಳು 3–4 ತಿಂಗಳು ಬಾಳಿಕೆ ಬಂದರೆ ಹೈಯಲ್ಯುರೋನಿಕ್ ಆಸಿಡ್‌ನಿಂದ ತಯಾರಿಸಿದ ಫಿಲ್ಲರ್‌ಗಳು 4– 6 ತಿಂಗಳು, ಕ್ಯಾಲ್ಸಿಯಂ ಹೈಡ್ರಾಕ್ಸಿ ಅಪಟೈಟ್ ನಿಂದ ತಯಾರಿಸಿದ ಫಿಲ್ಲರ್‌ಗಳು 6–8 ತಿಂಗಳು, ಪಾಲಿ ಎಲ್ ಲ್ಯಾಕ್ಟಿಕ್ ಆಸಿಡ್ ನಿಂದ ತಯಾರಿಸಿದ ತಯಾರಿಸಿದ ಫಿಲ್ಲರ್‌ಗಳು 2 ವರ್ಷಗಳವರೆಗೆ ಉಳಿಯಬಲ್ಲವು. ಶಾಶ್ವತವಾಗಿ ಉಳಿಯಬಲ್ಲ ಫಿಲ್ಲರ್ ಗಳಲ್ಲಿ ಪಾಲಿ ಮೀಥೈಲ್ ಮೆಥಾಕ್ರಿಲೇಟ್ ಬೀಡ್ಸ್‌ಗಳನ್ನು ಬಳಸಲಾಗುತ್ತದೆ.

### ಚಿಕಿತ್ಸೆ ನಡೆಯುವುದು ಹೇಗೆ?

ತುಟಿಗಳನ್ನು ಸೆಕ್ಸಿಯಾಗಿ ಕಾಣುವಂತೆ ಮಾಡಿಕೊಳ್ಳಲು, ಅವುಗಳು ಪ್ರಮಾಣಬದ್ಧವಾಗಿ ಕಾಣುವಂತೆ ಮಾಡಿಕೊಳ್ಳಲು ಮತ್ತು ಅವುಗಳಲ್ಲಿನ ಕುಂದು ಕೊರತೆಗಳನ್ನು ಮರೆ ಮಾಚಲು ತುಟಿಗಳಲ್ಲಿ ಡರ್ಮಲ್ ಫಿಲ್ಲರ್‌ಗಳ ಬಳಕೆ ಮಾಡಲಾಗುತ್ತಿದೆ. ಡರ್ಮಲ್ ಫಿಲ್ಲರ್ ಗಳನ್ನು ತುಂಬುವ ಮೊದಲು, ತುಟಿಗಳ ಮೇಲೆ ನೋವು ನಿವಾರಕ ಅರಿವಳಿಕೆಯ ಕ್ರೀಮ್ ಅನ್ನು ಹಚ್ಚಲಾಗುತ್ತದೆ. ಮತ್ತೆ ಕೆಲವರು ಬಾಯಿಯ ಒಳಗೆ ನೋವು ನಿವಾರಕ ಇಂಜೆಕ್ಷನ್ ಅನ್ನು ನೀಡುತ್ತಾರೆ. ನಂತರ ಸಣ್ಣ, ಸಣ್ಣ ಇಂಜೆಕ್ಷನ್ ಮೂಲಕ ತುಟಿಯಲ್ಲಿ ಡರ್ಮಲ್ ಫಿಲ್ಲರ್‌ಗಳನ್ನು ತುಂಬಲಾಗುತ್ತದೆ. ಇದಕ್ಕೆ ಪರಿಣಿತಿ